ವಿಷಯ :- ಮಾಸೂರ್ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 985 (214)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೆಕೆರೂರು ತಾಲ್ಲೂಕು ಮಾಸುರ ಪ್ರಾಥಮಿಕ ಆರೋಗ್ಯ ಕೇಂದ್ರವು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಿದ್ದು, ಇನ್ನೂವರೆಗೆ ಯಾವುದೇ ಕೆಲಸ ಆಗಿಲ್ಲದಿರಲು ಕಾರಣಗಳೇನು?

ಆ) ಮೇಲ್ದರ್ಜೆಗೇರಿದ ಕಾರ್ಯ ಯಾವಾಗ ಕಾರ್ಯರೂಪಗೊಳ್ಳುವುದು?

ಶ್ರೀ ಡಾ : ಹೆಚ್. ಸಿ. ಮಹದೇವಪ್ಪ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) 1996-97 ನೇ ಸಾಲಿಗಾಗಿ ಸಮುದಾಯ ಆರೋಗ್ಯ ಕೇಂದ್ರಗಳ ಕಟ್ಟಡಗಳ ಸಲುವಾಗಿ 10.00 ಲಕ್ಷ ರೂ. ಮಂಜೂರಾಗಿದ್ದು ಆದನ್ನು ಪ್ರಗತಿಯಲ್ಲಿರುವ ಕಲಘಟಗಿಯ ಕಟ್ಟಡಕ್ಕಾಗಿ ನೀಡಿರುವುದರಿಂದ ಮಸೂರದಲ್ಲಿನ ಸಮುದಾಯ ಆರೋಗ್ಯ ಕೇಂದ್ರಕ್ಕೆ ಅನುದಾನ ಲಭ್ಯವಾಗಿಲ್ಲ ಇರುವುದರಿಂದ ಕಟ್ಟಡವನ್ನು ಪ್ರಾರಂಭಿಸಿರುವುದಿಲ್ಲ.

ಆ) ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿಕೊಂಡು ಆದ್ಯತೆಯ ಮೇಲೆ ಕಟ್ಟಡದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ವಿಷಯ :- ರಾಜ್ಯದ ತಾಲ್ಲೂಕ್ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲ್ಲಿ ಕ್ಷ-ಕಿರಣ ಯಂತ್ರಗಳ ಅಳವಡಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 186 (140)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. 1995-96 ನೇ ಸಾಲಿಗೆ ತಾಲ್ಲೂಕು ಕೇಂದ್ರ ಆಸ್ಪತ್ರೆಗಳಿಗೆ ಕ್ಷ-ಕಿರಣ ಯಂತ್ರಗಳನ್ನು ಅಳವಡಿಸಲು ಜಿಲ್ಲಾವಾರು ಎಷ್ಟು ಹಣ ನಿಗದಿ ಮಾಡಲಾಗಿತ್ತು?

2. 1995-96 ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ಬಿಡುಗಡೆ ಆದ 8.00 ಲಕ್ಷ ರೂ.ಗಳಲ್ಲಿ ಕ್ಷ-ಕಿರಣ ಯಂತ್ರ ಖರೀದಿಸಿಲ್ಲದಿರುವುದಕ್ಕೆ ಕಾರಣಗಳೇನು?

3. 1994-95 ನೇ ಸಾಲಿನಲ್ಲಿಯೂ ಸಹ ಈ ಬಿಡುಗಡೆಯಾದ ರೂ. 8.00 ಲಕ್ಷ ರೂಪಾಯಿಗಳನ್ನು ಉಪಯೋಗಿಸಲಾಗಿಲ್ಲ ಎಂಬುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಹೊಣೆಗಾರರು ಯಾರು? ಹಾಗೂ ಇವರ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

1. ತಾಲ್ಲೂಕು ಆಸ್ಪತ್ರೆಗಳಿಗೆ ಕ್ಷ-ಕಿರಣ ಸೌಲಭ್ಯಗಳು

		ರೂ. ಲಕ್ಷಗಳಲ್ಲಿ
1. ಚಿತ್ರದುರ್ಗ ಜಿಲ್ಲೆ	-	5.00 ಲಕ್ಷಗಳು
2. ಕೋಲಾರ ಜಿಲ್ಲೆ	-	5.00 "
3. ಶಿವಮೊಗ್ಗ ಜಿಲ್ಲೆ	-	5.00
4. ಮೈಸೂರು ಜಿಲ್ಲೆ	-	5.00
5. ಕೊಡಗು ಜಿಲ್ಲೆ	-	1.00
6. ಬಿಜಾಪುರ ಜಿಲ್ಲೆ	-	0.50
7. ಧಾರವಾಡ ಜಿಲ್ಲೆ	-	8.00
8. ಉತ್ತರ ಕನ್ನಡ ಜಿಲ್ಲೆ	-	0.10
9. ಬೀದರ್ ಜಿಲ್ಲೆ	-	6.58
	ಮೊತ್ತ	36.18 ಲಕ್ಷಗಳು

2. ಕ್ಷ-ಕಿರಣ ಯಂತ್ರಕ್ಕೆ ದರ ಗುತ್ತಿಗೆ ಇಲ್ಲದ ಕಾರಣದಿಂದ ಖರೀದಿಸಲಾಗಲಿಲ್ಲ.

3. 1994-95 ನೇ ಸಾಲಿನಲ್ಲಿಯೂ ಸಹ ಕ್ಷ-ಕಿರಣ ಯಂತ್ರಕ್ಕೆ ದರಗುತ್ತಿಗೆ ಇಲ್ಲದ ಕಾರಣದಿಂದ ಖರೀದಿಸಲಾಗಲಿಲ್ಲ. ಆದ್ದರಿಂದ ಈ ಬಗ್ಗೆ ಹೊಣೆಗಾರಿಕೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಹೊಸೂರು ರಸ್ತೆಯಲ್ಲಿರುವ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 990 (1889)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸೂರು ರಸ್ತೆಯಲ್ಲಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ವಿವಿಧ ಹುದ್ದೆಗಳ ವಿವರ ನೀಡುವುದು)

ಆ) ಈ ಹುದ್ದೆಗಳಿಗೆ ಯಾವಾಗ ಅರ್ಜಿಗಳನ್ನು ಕರೆಯಲಾಗಿತ್ತು, ಬಂದ ಅರ್ಜಿಗಳ ಸಂಖ್ಯೆ ಎಷ್ಟು? (ವಿವಿಧ ಹುದ್ದೆಗಳ ಸಂಪೂರ್ಣ ವಿವರ ನೀಡುವುದು)